# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

48

ಇಲಾಖೆ / ವಿಷಯ : DEPARTMENT / SUBJECT: ಇತರೆ ರಾಜ್ಯಗಳ ಮಾಹಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE : 16-3-2021

16/3

### ಟೀ ಶರ್ಟ್‌ನಲ್ಲಿ ಬಂದ ಶಾಸಕ ಸದನದಿಂದ ಹೊರಕ್ಕೆ

16-3-21

ಗಾಂಧಿನಗರ: ಗುಜರಾತ್ ವಿಧಾನಸಭಾ ಅಧಿವೇಶನಕ್ಕೆ ಪದೇ ಪದೆ ಟೀ-ಶರ್ಟ್ ಧರಿಸಿ ಬರುತ್ತಿದ್ದ ಕಾಂಗ್ರೆಸ್‌ನ ಶಾಸಕ ವಿಮಲ್ ಚೂಡಾಸಮಾ ಅವರನ್ನು ಸ್ಪೀಕರ್ ರಾಜೇಂದ್ರ ತ್ರಿವೇದಿ ಸದನದಿಂದ ಹೊರಹಾಕಿದ ಘಟನೆ ಸೋಮವಾರ ನಡೆದಿದೆ. ಶಾಸಕರು ಸದನದ ಗೌರವ,



ಘನತೆಯನ್ನು ಕಾಪಾಡಬೇಕು. ಟಿ-ಶರ್ಟ್ ಧರಿಸಿ ಅಧಿವೇಶನಕ್ಕೆ ಬರುವುದು ಶಿಷ್ಟಾಚಾರವಲ್ಲ ಎಂದು ಸ್ಪೀಕರ್ ಹೇಳಿದರು. ಆದರೆ, ಇದಕ್ಕೆ ಪ್ರತಿಪಕ್ಷ ಕಾಂಗ್ರೆಸ್ ವಿರೋಧ ವ್ಯಕ್ತಪಡಿಸಿತು. ಶಾಸಕರು ಸದನಕ್ಕೆ ಇಂಥದ್ದೇ ವಸ್ತ್ರ ಧರಿಸಿಬರಬೇಕೆಂಬ ನಿಯಮವೇನೂ ಇಲ್ಲ ಎಂದು ಕಾಂಗ್ರೆಸ್ ಸದಸ್ಯರು ವಾದಿಸಿದರು. ಸೋಮನಾಥದಿಂದ ಮೊದಲ ಬಾರಿಗೆ ಆಯ್ಕೆ ಆಗಿರುವ ವಿಮಲ್, ಕಳೆದ ವಾರ ಕೂಡ ಅಧಿವೇಶನಕ್ಕೆ ಟೀ ಶರ್ಟ್ ಧರಿಸಿ ಬಂದಿದ್ದರು. ಆಗ ಎಚ್ಚರಿಕೆ ನೀಡಿದ್ದ ಸ್ಪೀಕರ್, ಈ ರೀತಿಯ ಬಟ್ಟೆ ಧರಿಸಿ ಬರುವುದನ್ನು ಪುನರಾವರ್ತಿಸಬೇಡಿ. ಸಭ್ಯ ಉಡುಗೆಯಲ್ಲಿ ಬನ್ನಿ ಎಂದು ಹೇಳಿದ್ದರು. ಆದರೆ, ವಿಮಲ್ ಸೋಮವಾರ ಮತ್ತೆ ಟೀ ಶರ್ಟ್ ಹಾಕಿಕೊಂಡು ಸದನಕ್ಕೆ ಬಂದಿದ್ದರು.